ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**<u>ಸಿ.ಸಿ. ಸಂಖ್ಯೆಃ 706/2019</u>**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು ಃ ಎ **1.** ಅಂಬಿಕ,
ತಂದೆ - ಕುಮಾರ
ಸುಮಾರು **26** ವರ್ಷ ವಯಸ್ಸು,
ವಾಸಃ ಕುಪ್ಪೆ ಗ್ರಾಮ
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

ಎ **2.** ಕುನ್ನೇಗೌಡ
ತಂದೆ - ರಾಮೇಗೌಡ

(ಮೃತಪಟ್ಟಿರುತ್ತಾರೆ)

**<u>ದೋಷಾರೋಪಣೆ</u>**

ಶ್ರೀಮತಿ ಪೂಜಾ ಬೆಳಕೇರಿ, ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿನಾಂಕ 15.06.2018 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಪ್ಪೆ ಗ್ರಾಮದಲ್ಲಿ ಸಾಕ್ಷಿ 1 ಮತ್ತು 1 ನೇ ಆರೋಪಿಯಾದ ನಿಮಗೂ ಕಲ್ಲು ಒತ್ತುಹಾಕಿ ಒತ್ತುವರಿ ಮಾಡಿಕೊಂಡಿರುವ ವಿಚಾರದಲ್ಲಿ ಗಲಾಟೆಯಾಗಿದ್ದ ಹಿನ್ನಲೆಯಲ್ಲಿ ಸಾಕ್ಷಿ 1 ಮತ್ತು ಸಾಕ್ಷಿ 2 ರವರು ಸಾಕ್ಷಿ

4 ರವರ ಮನೆ ಮುಂಭಾಗ ಹೋಗುತ್ತಿದ್ದಾಗ 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿಯೊಂದಿಗೆ ಸೇರಿ ಸಾಕ್ಷಿ 1 ಮತ್ತು 2 ಅವರನ್ನು ಅಡ್ಡಗಟ್ಟಿ ಅವರಿಗೆ ಅಕ್ರಮ ತಡೆಯನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿಯೊಂದಿಗೆ ಸೇರಿ ಸಾಕ್ಷಿ 1 ಮತ್ತು 2 ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿಯೊಂದಿಗೆ ಸೇರಿ ಅಪರಾಧ ಎಸಗುವ ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಸಾಕ್ಷಿ 2 ಅವರನ್ನು ಹಿಡಿದು ಎಳೆದಾಡಿ ಕೈಯಿಂದ ಎದೆಗೆ ಗುದ್ದಿ ಸಾಮಾನ್ಯ ಸ್ವರೂಪದ ನೋವನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ನೇ ಆರೋಪಿಯಾದ ನೀವು ಮೃತ 2 ನೇ ಆರೋಪಿಯೊಂದಿಗೆ ಸೇರಿ ಅಪರಾಧ ಎಸಗುವ ಸಮಾನ ಉದ್ದೇಶದಿಂದ, ಸಾಕ್ಷಿ 1 ಅವರ ಕತ್ತಿನ ಪಟ್ಟಿಯನ್ನು ಹಿಡಿದು ಎಳೆದಾಡಿ ಮಾರಕಾಸ್ತ್ರವಾದ ಹೆಂಚಿನ ಚೂರಿನಿಂದ ಬಲಕೈ ಕಿರುಬೆರಳಿಗೆ ಹೊಡೆದು ರಕ್ತಗಾಯ ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ಪೂಜಾ ಬೆಳಕೇರಿ)**
ದಿನಾಂಕಃ **14.03.2024**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ**.**ದ**.**ನ್ಯಾ**.**ದಂಡಾಧಿಕಾರಿಗಳು**,** ಹುಣಸೂರು**.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆ: 706/2019**

ಫಿರ್ಯಾದಿದಾರರು: ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : ಎ 1. ಅಂಬಿಕ,
ತಂದೆ - ಕುಮಾರ

ಭಾರತೀಯ ದಂಡ ಸಂಹಿತೆ ಕಲಂ **240(2)** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ: ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ**?**

ಉತ್ತರ:

ಪ್ರಶ್ನೆ: ತಪ್ಪೊಪ್ಪಿಕೊಳ್ಳುವಿರೋ**,** ವಿಚಾರಣೆಯಾಗಬೇಕೆನ್ನುವಿರೋ**?**

ಉತ್ತರ:

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಪೂಜಾ ಬೆಳಕೇರಿ)
ದಿನಾಂಕ: **14.03.2024** ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದಂ.ನ್ಯಾ.. ದಂಡಾಧಿಕಾರಿಗಳು, ಹುಣಸೂರು.